ಬಿಜಾಪುರ ತಾಲ್ಲೂಕಿನ ಕಂಬೋಗಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರು-ಸಿಬ್ಬಂದಿಗಳ ನೇಮಕಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 199(221)

ಸದಸ್ಯರ ಹೆಸರು: ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ)

ಉತ್ತರಿಸುವ ಸಚಿವರು: ಡಾ।। ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ಬಿಜಾಪುರ ತಾಲ್ಲೂಕಿನ ಕಂಬೋಗಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರು ಮತ್ತು ವೈದ್ಯಕೀಯೇತರ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕುರಿತು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಉತ್ತರ

ಅ ಮತ್ತು ಆ) ಬಿಜಾಪುರ ತಾಲ್ಲೂಕಿನ ಕಂಬೋಗಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವ ಪ್ರಸ್ತಾವನೆಯು ಇನ್ನೂ ಪರಿಶೀಲನೆಯಲ್ಲಿರುವುದರಿಂದ ಸಿಬ್ಬಂದಿ ಕೊರತೆಯ ಪ್ರಶ್ನೆ ಈ ಹಂತದಲ್ಲಿ ಉದ್ಭವಿಸುವುದಿಲ್ಲ.

ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯ ನಗರ ಮತ್ತು ಪಟ್ಟಣಗಳಿಗೆ ಕೊಳಚೆ ನಿರ್ಮೂಲನಾ ಮಂಡಳಿಯ ವತಿಯಿಂದ ಹಣ ಬಿಡುಗಡೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:200(223)

ಸದಸ್ಯರ ಹೆಸರು: ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ)

ಉತ್ತರಿಸುವ ಸಚಿವರು: ಶ್ರೀ ಖಮರುಲ್ ಇಸ್ಲಾಂ(ವಸತಿ ಸಚಿವರು)